ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಕುದುರೆಯನ್ನು ಮುಂದಿನಿಂದ ನೋಡು, ಹೆಣ್ಣನ್ನು ಹಿಂದಿನಿಂದ ನೋಡು ಎನ್ನುತ್ತಾರಲ್ಲ, ಏಕೆ?



ಇದೊಂದು ಗೂಢಾರ್ಥದ ನುಡಿ. ಕಡಿವಾಣ ಹಿಡಿ; ಬೆಂಬಲ ನೀಡು ಎನ್ನುವುದೇ ಇದರರ್ಥ.

ಕೆ. ಹರಿಪ್ರಸಾದ್ ಸಗ್ರಿ, ಕುಂಜಿಬೆಟ್ಟು

ಶ್ರೀಕೃಷ್ಣನನ್ನು ನಂಬುವ ನಾವು ಅವನ ವಸುಧೈವ ಕುಟುಂಬಕಂ ತತ್ವವನ್ನೇಕೆ ನಂಬುವುದಿಲ್ಲ?

ಏಕೆಂದರೆ ನಮ್ಮಲ್ಲಿರುವುದು ವ್ಯಕ್ತಿಪೂಜೆ; ತತ್ವಪೂಜೆಯಲ್ಲ.

ಬಿ.ಆರ್. ಉಷಾ, ಬೆಂಗಳೂರು

ಹೆಣದ ಬಾಯಿಗೆ ಹಣ ಹಾಕಿದರೂ ಬಾಯಿ ಬಿಡಲಿಲ್ಲ. ಯಾಕೆ ಗುರು?

ಹಾಕಿದ್ದು ಬ್ಯಾನ್ ಆಗಿರುವ ಸಾವಿರ ರೂಪಾಯಿಯ ನೋಟಂತೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ದೇವರ ಕೈಯಲ್ಲಿ ಮೊಬೈಲ್ ಇದ್ದರೆ ಹೇಗಿರುತ್ತೆ?



ಭಕ್ತರ ಕಂಟಿನ್ಯೂಯಸ್ ಕರೆ ಕೇಳಲಾರದೆ ಮ್ಯೂಟ್ ಆಗಿರುತ್ತೆ.

ಅನಸೂಯ ಟಿ, ಕೇದಿಗೆಮನೆ

ಮಾತಿಗೆ ತೂಕವಿರಬೇಕು ಎನ್ನುತ್ತಾರಲ್ಲ, ಹಾಗೆಂದರೇನು?

ಜಲದಾಳ ತಲುಪುವ ತೂಕದಂತೆಯೇ ಮನದಾಳವನ್ನು ಮಾತು ತಲುಪಬೇಕೆಂದು.

ಮಲ್ಲಿಕಾರ್ಜುನ, ಸುರಧೇನುಪುರ

ಪುರುಷ ಜನಪ್ರತಿನಿಧಿಗೆ ರಾಜಕಾರಣಿ ಓ.ಕೆ. ಸ್ತ್ರೀಯರಿಗೂ ಅದೇ ಹೆಸರು ಏಕೆ?

ರಾಜಕಾರಣಿ ಪದದಲ್ಲೇ ರಾಣಿ ಇರುವುದರಿಂದ.

ವಿ. ಗೋವಿಂದಾಚಾರಿ, ಮೈಸೂರು

ಸಭೆ ಸಮಾರಂಭಗಳಲ್ಲಿ ಶ್ರೀಶ್ರೀಗಳು ಕುಳಿತೇ ಆಶೀರ್ವಚನ ನೀಡುವುದೇಕೆ?

ತಾವು ನಿಲ್ಲುವುದಕ್ಕಿಂತ ತಮ್ಮ ಮಾತು ಜನಮನದಲ್ಲಿ ನಿಲ್ಲುವುದು ಮುಖ್ಯವೆಂಬ ಅರಿವು.

ಪುಷ್ಪ ಎಂ.ವಿ. ಬೆಂಗಳೂರು

ದೇವರಿಗೆ ನಮ್ಮ ಪ್ರಾರ್ಥನೆ ತಲುಪಿಸುವ ಬಗೆ ಎಂತು?

ಭಕ್ತಿಯ ಸಿಮ್ ಹಾಕಿಕೊಳ್ಳಿ. ದೇವನ ನೆಟ್‌ವರ್ಕ್ ತಂತಾನೇ ತೆರೆದುಕೊಳ್ಳುತ್ತದೆ.

ಗಂಜಾಂ ನಾಗರಾಜ್, ಮೈಸೂರು

ಅಪ್ಪ ಇಲ್ಲವಾದ ಕೂಡಲೆ ಅಮ್ಮನನ್ನು ಗಂಡುಮಕ್ಕಳು ಫುಟ್‌ಬಾಲ್‌ನಂತೆ ಆಡಿಸುವುದು ಏಕೆ?

ಆತ್ಮಸ್ಥೈರ್ಯ ಕುಗ್ಗಿರುತ್ತದಲ್ಲ. ಮೊಲದ ಮೇಲೆ ಎರಗುವುದು ಹದ್ದುಗಳ ಚಾಳಿ.

ಎಚ್. ಸಿದ್ದಾರ್ಥ, ಈದು

ಹ್ಯುಮಾನಿಟಿ, ಇಮ್ಯುನಿಟಿ ಇವುಗಳಲ್ಲಿ ಯಾವುದು ಅತ್ಯವಶ್ಯಕ?

ಇಮ್ಯುನಿಟಿ ಮಾತ್ರೆಗಳಿಂದ ದೊರಕೀತು. ಹ್ಯುಮಾನಿಟಿಗೆ ಮಾತೃಹೃದಯವೇ ಬೇಕು.

ಜಗದೀಶ ಬಿ. ಹೊಸೂರು, ಮೈಸೂರು

ನಿಜಜೀವನದ ಮದುವೆಗಳು ಒಂದೆರಡೇ ದಿನದವು. ಸೀರಿಯಲ್ ಮದುವೆ ತಿಂಗಳ್ಗಟ್ಲೆ ನಡೆಯುವುದಲ್ಲ?

ಇವು ಖರ್ಚಿನ ಬಾಬ್ತು, ಮುಗಿಯುತ್ತವೆ; ಅವು ಆದಾಯದ ಬಾಬ್ತು, ಹಿಂಜಿ ಹಿಂಜಿ ಹಿಗ್ಗುತ್ತವೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ನರಿಯ ಬುದ್ಧಿಗೂ, ನರನ ಬುದ್ಧಿಗೂ ಇರುವ ವ್ಯತ್ಯಾಸವೇನು?

ನರಿ ಎಂದಿಗೂ ಪ್ರಕೃತಿಗೆ ಹಾನಿಕರವಾದ ಕೆಲಸವನ್ನು ಮಾಡಿಲ್ಲ.

ಹೆಚ್.ವಿ. ರಂಗನಾಥ, ಬೆಂಗಳೂರು

ಕಲ್ಯಾಣ ಕರ್ನಾಟಕ ಎಂದು ನಾಮಕರಣ ಆದ ಮೇಲೂ ಅಭಿವೃದ್ಧಿ ಆಗಿಲ್ಲವಂತೆ. ಮುಂದೆ?

ಬದಲಾಗಬೇಕಾದ್ದು ನಾಮವಲ್ಲ, ನಾಮ ಹಾಕುವವರು.

## ವಾರದ ಪ್ರಶ್ನೆ

ಜಯಲಕ್ಷ್ಮಿ ಉಪಾಧ್ಯಾಯ, ಕಂಚಾರ್ತಿ

ಪ್ಲೇಗಮ್ಮ, ಕಾಲರಮ್ಮ, ಕೊರೊನಮ್ಮ; ಎಲ್ಲವೂ ಅಮ್ಮಗಳೇ; ಅಪ್ಪಗಳು ಯಾಕಲ್ಲ?

ಹುಟ್ಟಿದ ಸ್ಥಳ, ಸೇರಿದ ಸ್ಥಳ ಎರಡು ಕಡೆಯೂ ಸಕ್ರಿಯವಾಗಿರುವುದು ಹೆಣ್ಣೇ ಆದ್ದರಿಂದ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಬರೀ ದೇವರನ್ನೇ ನಂಬಿ ಕುಳಿತರೆ ಏನಾಗುತ್ತದೆ?

ವಯಸ್ಸಾಗುತ್ತದೆ.

ಸ್ವಾತಿ

ಕಟ್ಟಡವನ್ನು ಕಟ್ಟಿ ಆದರೂ ಬಿಲ್ಡಿಂಗ್ ಎಂದು ಹೇಳುವುದು ಏಕೆ?

ಕಂಟ್ರಾಕ್ಟರ್ ಏನಾದರೂ ಕೆಲಸ ಉಳಿಸಿಯೇ ಇರುತ್ತಾನೆಂಬ ದೃಢ ವಿಶ್ವಾಸ.

ವಿ. ಹೇಮಂತಕುಮಾರ್, ಬೆಂಗಳೂರು

ಹೂವುಗಳಿಗೆ ದುಂಬಿಗಳ ಕಾಟ ತಪ್ಪಲ್ಲ, ಅಲ್ಲವೆ?



ಚೆಂಡುಹೂ, ಸೇವಂತಿಗೆಯಂಥ ಹೂಗಳಿಗೆ ಆ ಕಾಟವೇ ಇಲ್ಲ.

ದಿನೇಶ್, ಗುಡ್ಡದೂರು

ಚಲನಚಿತ್ರ ನಟನಟಿಯರನ್ನು, ಕ್ರಿಕೆಟ್ ಆಟಗಾರರನ್ನು ದೇವರಿಗೆ ಹೋಲಿಸುವುದೇಕೆ?

ಒಂದೊಂದು ಬಾರಿ ಒಂದೊಂದು ಅವತಾರದಲ್ಲಿ ಇರುವುದರಿಂದ.

ಬೆಂ.ಮು. ಮಾರುತಿ, ಬೆಂಗಳೂರು

ಬಾನಿಗೂ ಭುವಿಗೂ ಮಧ್ಯೆ ಏನಿದೆ ರಾಮ್?

ಗಾಳಿಗೋಪುರ ಕಟ್ಟಲು ವಿಸ್ತಾರವಾದ ಜಾಗ.

ಜಗದೀಶ್, ಮೈಸೂರು

ತಲೆಯಿಲ್ಲದೆ ಹರಟೆ ಸಾಧ್ಯವಿಲ್ಲ. ಆದರೂ ತಲೆಹರಟೆ ಎನ್ನುವುದೇಕೆ?

ತಲೆಯೆಂದರೆ ಮೆದುಳುಬುರುಡೆ. ಮೆದುಳಿಂದ ಹೊರಟಿದ್ದು ಹರಟೆ. ಬುರುಡೆಯಿಂದ ಹೊರಟಿದ್ದು ತಲೆಹರಟೆ.

■ ರಾಮ್